**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಇ.ಸಿ.ಎ. ನಂ. 08/2022.**

**ಪಿ ಡಬ್ಲ್ಯೂಃ 1**

**ದಿನಾಂಕಃ 04-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ**

ನಿಪಿ-1ಃ ಹಾವೇರಿ ರೂರಲ್ ಪಿ.ಎಸ್. ಕ್ರೈಂ ನಂ. 28/2022 ರಲ್ಲಿನ ಎಫ್.ಐ.ಆರ್. ನ ಧೃಡಿಕೃತ ನಕಲು.

ನಿಪಿ-2ಃ ದೂರು.

ನಿಪಿ-3ಃ ಸ್ಥಳ ಪಂಚನಾಮೆ ನಕಾಶೆ ಹಾಗೂ ಪೋಟೊ ಸಹಿತ.

ನಿಪಿ-4ಃ ಎಂ.ವಿ ವರದಿ.

ನಿಪಿ-5ಃ ಗಾಯದ ಪ್ರಮಾಣ ಪತ್ರ

ನಿಪಿ-6ಃ ಎಸ್.ಡಿ.ಎಂ. ಆಸ್ಪತ್ರೆಯ ಗಾಯದ ಪ್ರಮಾಣ ಪತ್ರ

ನಿಪಿ-7ಃ ಅಂತಿಮ ವರದಿ.

ನಿಪಿ-8ಃ ಅಂಗನ್ಯೂನತಾ ಪ್ರಮಾಣ ಪತ್ರ.

ನಿಪಿ-9ಃ ಎಸ್.ಡಿ.ಎಂ. ಆಸ್ಪತ್ರೆಯ ದಿನಾಂಕಃ 28.02.2022 ರಿಂದ 05.03.2022 ವರೆಗಿನ ಡಿಸ್ಚಾರ್ಜ್ ಸಮ್ಮರಿ

ನಿಪಿ-10 ಎಸ್.ಡಿ.ಎಂ. ಆಸ್ಪತ್ರೆಯ ದಿನಾಂಕಃ 27.03.2022 ರಿಂದ 31.03.2022 ವರೆಗಿನ ಡಿಸ್ಚಾರ್ಜ್ ಸಮ್ಮರಿ.

ನಿಪಿ-11ಃ ಎಸ್.ಡಿ.ಎಂ. ಆಸ್ಪತ್ರೆಯ ದಿನಾಂಕಃ 05.03.2022 ರಿಂದ 18.03.2022 ವರೆಗಿನ ಡಿಸ್ಚಾರ್ಜ್ ಸಮ್ಮರಿ

ನಿಪಿ-12ಃ 49 ವೈದ್ಯಕೀಯ ಬಿಲ್ಲುಗಳು ಒಟ್ಟಾಗಿ ನಿಪಿ-12 ಎಂದು ಎದುರುದಾರರ ಪರವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ.

ನಿಪಿ-13ಃ 35 ವೈದ್ಯಕೀಯ ಸಲಹಾ ಚೀಟಿಗಳನ್ನು ನಿಪಿ-13 ಎಂದು ಎದುರುದಾರರ ಪರವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ.

ನಿಪಿ-14ಃ 3 ಎಕ್ಸ್-ರೇಗಳನ್ನು ನಿಪಿ-14 ಎಂದು ಎದುರುದಾರರ ಪರವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ.

ಈ ಕಾರಣಗಳಿಗಾಗಿ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಎ.ಎಸ್.ಪಿ. ವಕೀಲರಿಂದಃ**

ನನ್ನ ಅರ್ಜಿಯಲ್ಲಿ ಬರೆದ ಸಂಗತಿಗಳ ಬಗ್ಗೆ ಹಾಗೂ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ ಸದರಿ ಅಪಘಾತವಾದ ದಿನ ನಾನು ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ನನಗೆ ಡಿಎಲ್ ಇತ್ತು ಎಂದು ತೋರಿಸುವ ದಾಖಲೆಗಳನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ನಾನು ಪೋಲಿಸರಿಗೆ ನೀಡಿರುತ್ತೇನೆ ಎನ್ನುತ್ತಾರೆ. ಸದರಿ ಅಪಘಾತವಾದ ಸಮಯದಲ್ಲಿ ನನಗೆ 24 ವರ್ಷ ವಯಸ್ಸು ಇತ್ತು ಎಂದು ತೋರಿಸುವ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಆನಂದ ಜೋಶಿ ಎಂಬುವವರ ಬಗ್ಗೆ ನನಗೆ ಮಾಹಿತಿ ಇಲ್ಲ.

2. 1 ನೇ ಎದುರುದಾರರ ಕಂಪನಿಯ ಮ್ಯಾನೇಜರ್ ರವರ ಹೆಸರು ನನಗೆ ಗೊತ್ತಿಲ್ಲ. ಸದರಿ ನಾನು ಗೂಡ್ಸ ಲಾರಿಯನ್ನು ಚಾಲನೆ ಮಾಡುತ್ತಿದ್ದಾಗ ಒಮ್ಮೇಲೆ ಸದರಿ ಲಾರಿಗೆ ಪ್ರಾಣಿ ಅಡ್ಡಬಂದಿದ್ದರಿಂದ ಅದನ್ನು ತಪ್ಪಿಸಲು ಹೋಗಿ

ಅಪಘಾತವಾಗಿರುತ್ತದೆ. ಪೋಲಿಸರು ಸಲ್ಲಿಸಿದ ಅಂತಿಮ ವರದಿಯಲ್ಲಿ ನಮೂದಿಸಿದ ಸಂಗತಿಗಳು ಸರಿಯಾಗಿವೆ. ಪೋಲಿಸ್ ದಾಖಲೆಗಳ ಪ್ರಕಾರ ಸದರಿ ಲಾರಿಯನ್ನು ನಾನು ಚಾಲನೆ ಮಾಡುತ್ತಿರಲಿಲ್, ಓರ್ವ ಮಂಜುನಾಥ ಎಂಬುವವನು ಚಾಲನೆ ಮಾಡುತ್ತಿದ್ದ ಎಂದರೆ ಸಾಕ್ಷಿ ನನಗೆ ನಾಗನಗೌಡ ಹಾಗೂ ಮಂಜುನಾಥ ಎಂತಲೂ ಕರೆಯುತ್ತಾರೆ ಎನ್ನುತ್ತಾರೆ. ನನಗೆ ನಾಗನಗೌಡ ಅಲಿಯಾಸ್ ಮಂಜುನಾಥ ಎಂತಲೂ ಕರೆಯುತ್ತಾರೆ ಎಂದು ತೋರಿಸುವ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಆ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರು ಪಡಿಸದೇ ಇದ್ದರೂ ಸಹ ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಿಪಿ-1 ರಲ್ಲಿ ಸದರಿ ಲಾರಿ ಚಾಲಕನ ಹೆಸರು ಮಂಜುನಾಥ ಪೋಲಿಸಪಾಟೀಲ ಎಂದು ನಮೂದಾಗಿದೆ ಎಂದರೆ ಸರಿ. ಹಾಗೂ ನಿಪಿ-7 ಅಂತಿಮ ವರದಿಯಲ್ಲಿ ಸದರಿ ಲಾರಿ ಚಾಲನಕ ಹೆಸರು ನಾಗನಗೌಡ ಕುಬೇರಗೌಡ ಪೋಲಿಸಪಾಟೀಲ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಪಿ-1 ಹಾಗೂ 7 ರಲ್ಲಿ ನನ್ನ ಹೆಸರನ್ನು ಬೇರೆ ಬೇರೆ ರೀತಿಯಲ್ಲಿ ನಮೂದಿಸಲಾಗಿದೆ ಎಂದರೆ ಸಾಕ್ಷಿ ಸದರಿ ದಿನ ಲಾರಿಯಲ್ಲಿ ನನ್ನ ಜೊತೆಯಲ್ಲಿದ್ದ ಬಸವರಾಜ ಬೆಳ್ಳಿವಾಲಿರವರು ನನ್ನ ಹೆಸರನ್ನು ಮಂಜುನಾಥ ಎಂದು ಬರೆಯಿಸಿರುತ್ತಾರೆ ಎನ್ನುತ್ತಾರೆ. ನನ್ನ ದಾಖಲೆಗಳಲ್ಲಿ ನನ್ನ ಹೆಸರು ನಾಗನಗೌಡ ಎಂದು ನಮೂದು ಇದೆ ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ರೀತಿಯ ಯಾವುದೇ ಹೇಳಿಕೆಯನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

4. ಸದರಿ ಲಾರಿಯಲ್ಲಿ ನನ್ನನ್ನು ಸೇರಿ ಇಬ್ಬರು ಇದ್ದೆವು. ಸದರಿ ಲಾರಿಯಲ್ಲಿ ಒಟ್ಟಾಗಿ 3 ಜನ ಇದ್ದೆವು ಎಂದರೆ ಸರಿಯಲ್ಲ. ಸದರಿ ಅಪಘಾತವಾದ ಸಮಯದಲ್ಲಿ ನಾನು 1 ನೇ ಎದುರುದಾರರ ಕಂಪನಿಯಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿ2 ದ್ದೆ ಹಾಗೂ ಸದರಿಯವರ ಸೂಚನೆ ಮೇರೆಗೆ ಸದರಿ ವಾಹನವನ್ನು ಚಾಲನೆ

ಮಾಡಿಕೊಂಡು ಹೋಗುತ್ತಿದ್ದೆ ಎಂದು ತೋರಿಸುವ ದಾಖಲೆಗಳನ್ನು ಹಾಜರು ಪಡಿಸಿರುತ್ತೀರಾ ಎಂಬ ಪ್ರಶ್ನೇಗೆ ಸಾಕ್ಷಿ ಬಿಲ್ಲುಗಳನ್ನು 1 ನೇ ಎದುರುದಾರರ ಕಂಪನಿಯವರೇ ಇಟ್ಟುಕೊಂಡಿರುತ್ತಾರೆ ಎನ್ನುತ್ತಾರೆ. ನಾನು ಈಗ 1 ನೇ ಎದುರುದಾರರ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ. ನಾನು 1 ನೇ ಎದುರುದಾರರ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ 1 ತಿಂಗಳ ಅವಧಿಯಲ್ಲಿ ಸದರಿ ಅಪಘಾತ ಆಯಿತು. 1 ನೇ ಎದುರುದಾರರ ಕಂಪನಿಯವರು ನನ್ನನ್ನು ಕೆಲಸಕ್ಕೆ ನೇಮಿಸಿಕೊಂಡ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿಲ್ಲ. ಸದರಿ ಅಪಘಾತವಾದ ದಿನ ಅಥವಾ ಸದರಿ ದಿನದ 1 ತಿಂಗಳ ಮುಂಚೆಯಿಂದ ಸದರಿ ಕಂಪನಿಯಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

5. ನಾನು 1 ನೇ ಎದುರುದಾರರ ಕಂಪನಿಯಲ್ಲಿ ಸಂಬಳವನ್ನು ಪಡೆದಿರುತ್ತೇನೆ. ಸದರಿ ಕಂಪನಿಯವರು ವೇತನವನ್ನು ಕಾರ್ಮಿಕರ ಬ್ಯಾಂಕ್ ಖಾತೆಗೆ ವರ್ಗಾಯಿಸುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ವೇತವನ್ನು ನನ್ನ ಕೈಗೆ ನೀಡಿದ್ದರು ಎನ್ನುತ್ತಾರೆ. ನನ್ನ ಬ್ಯಾಂಕ್ ಸ್ಟೇಟ್ ಮೆಂಟನ್ನು ಹಾಜರು ಪಡಿಸಿಲ್ಲ ಎಂದರ ಸರಿ. ನನ್ನ ಅರ್ಜಿಯಲ್ಲಿ ಬರೆದಿರುವ ಸಂಗತಿಗಳು ಸತ್ಯ ಸಂಗತಿಗಳು ಆಗಿವೆ. ಸದರಿ ಅಪಘಾತವಾದ 5 ತಿಂಗಳ ಮುಂಚೆಯಿಂದ ನಾನು 1 ನೇ ಎದುರುದಾರರ ಕಂಪನಿಯಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದು ನನ್ನ ಅರ್ಜಿಯಲ್ಲಿ ಬರೆಯಿಸಿದ್ದೆ ಎಂದರೆ ಸರಿ. ನಾನು ಕರ್ನಾಟಕ ಬ್ಯಾಂಕ್, ಲಕ್ಷ್ಮೇಶ್ವರ ಶಾಖೆಯಲ್ಲಿ ಖಾತೆ ಹೊಂದಿರುತ್ತೇನೆ. 1 ನೇ ಎದುರುದಾರರು ನನಗೆ ವೇತನ ಬ್ಯಾಂಕ್ ಮುಖಾಂತರ ಪಾವತಿಸಿದ ಬಗ್ಗೆ ನಾನು ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಮೊದಲನೇಯ ಚಾಲಕನಿಗೆ ಬ್ಯಾಂಕ್ ಮುಖಾಂತರ ವೇತನ ಪಾವತಿಸಿರುತ್ತಾರೆ. 2 ನೇ ಚಾಲಕನಿಗೆ ಬ್ಯಾಂಕ್ ಮುಖಾಂತರ ವೇತನ ಪಾವತಿಸುವುದಿಲ್ಲ ಎನ್ನುತ್ತಾರೆ.

6. ನನ್ನನ್ನು 1 ನೇ ಎದುರುದಾರರ ಕಂಪನಿಯವರೇ ನೇಮಕ ಮಾಡಿಕೊಂಡಿರುತ್ತಾರೆ. ಸದರಿ ಲಾರಿಯಲ್ಲಿ ನಾನು ಅನಧಿಕೃತ ಪ್ರಮಾಣಿಕನಾಗಿ ಪ್ರಯಾಣಿಸುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನನಗೆ ಲಾರಿ ಚಾಲನೆ ಮಾಡುವ ಡಿಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ನಾನು 1 ನೇ ಎದುರುದಾರರ ಸೂಚನೆ ಮೇರೆಗೆ ಸದರಿ ಲಾರಿಯನ್ನು ಚಾಲನೆ ಮಾಡುತ್ತಿದ್ದೆ ಎಂದು ತೋರಿಸುವ ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ ಹಾಗೂ ಅದರ ಬಗ್ಗೆ ಪೋಲಿಸ್ ದಾಖಲೆಗಳಲ್ಲಿ ಸಹ ನಮೂದಿಲ್ಲ ಎಂದರೆ ಸರಿಯಲ್ಲ. ನಾನು ಕಾರ್ಮಿಕ ಎಂದು ಗದಗನ ಕಾರ್ಮಿಕ ಇಲಾಖೆಯಲ್ಲಿ ನೊಂದಣಿ ಮಾಡಿಸಿರುತ್ತೇನೆ. ಆ ಬಗ್ಗೆ ನಾನು ಯಾವುದೇ ನೊಂದಣಿ ಮಾಡಿಸದೇ ಇದ್ದರೂ ಸಹ ಮಾಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಸದರಿ ಅಪಘಾತವಾದ ನಂತರ 1 ನೇ ಎದುರುದಾರರಿಗೆ ಪರಿಹಾರ ನೀಡುವಂತೆ ನೋಟಿಸ್ಸನ್ನು ನೀಡಿದ್ದೆ ಅದರ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿಲ್ಲ. ನಾನು ಪರಿಹಾರ ಕೇಳಿ 1 ನೇ ಎದುರುದಾರರಿಗೆ ಯಾವುದೇ ನೋಟಿಸ್ಸನ್ನು ನೀಡದೇ ಇದ್ದರೂ ಸಹ ನೀಡಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನ್ನ ಯಾವುದೇ ಮೂಳೆ ಮುರಿತ ಆಗಿಲ್ಲ ಎಂದರೆ ಸರಿಯಲ್ಲ. ಹಾಗೂ ವೈದ್ಯರು ನನ್ನ ದೈಹಿಕ ಪರೀಕ್ಷೆ ಮಾಡದೇ ನನ್ನ ಕೋರಿಕೆಯ ಮೇರೆಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಸುಳ್ಳು ಅಂಗನ್ಯೂನತೆ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ.

8. ಸದರಿ ಅಪಘಾತವಾದ ಸಮಯದಲ್ಲಿ ನನ್ನ ಹಾಗೂ 1 ನೇ ಎದುದಾರರನ ಮದ್ಯೆ ಕಾರ್ಮಿಕ ಹಾಗೂ ಮಾಲೀಕನ ಸಂಬಂಧ ಇಲ್ಲದೇ ಇದುದ್ದರಿಂದ ನಾನು 1 ನೇ ಎದುರುದಾರನಿಗೆ ನೋಟಿಸ್ಸು ನೀಡಿಲ್ಲ ಎಂದರೆ ಸರಿಯಲ್ಲ. ಅದೇರೀತಿ 1 ನೇ ಎದುರುದಾರ ಕಂಪನಿಯವರು ಒಂದೇ ವಾಹನದಲ್ಲಿ 2 ಅಥವಾ 3 ಚಾಲಕರನ್ನು ಏಕಕಾಲಕ್ಕೆ ಕರ್ತವ್ಯ ನಿರ್ವಹಿಸುವ ಬಗ್ಗೆ ಹೆಚ್ಚಿನ ಪ್ರೀಮಿಯಮ್ ನ್ನು ಪಾವತಿಸಿಲ್ಲ

ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ನನಗೆಯಾವುದೇ ರೀತಿಯ ಶಾಶ್ವತ ಅಂಗನ್ಯೂನತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ಸದರಿ 1 ನೆ; ಎದುರುದಾರ ಹಾಗೂ ನನ್ನ ಮದ್ಯೆ ಮಾಲೀಕ ಮತ್ತು ಕಾರ್ಮಿಕನ ಸಂಬಂಧ ಇಲ್ಲದೇ ಇದ್ದುದ್ದರಿಂದ ನಾನು ಸಲ್ಲಿಸಿರುವ ಈ ಅರ್ಜಿ ವಜಾಗೊಳ್ಳಲು ಅರ್ಹವಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಎದುರುದಾರ 2 ನೇ ಎದುರುದಾರ ಕಂಪನಿಯ ವಿಮಾ ಪಾಲಸಿಯ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದರಿಂದ 2 ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾಧ್ಯಸ್ತರು ಅಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯುವ ಉದ್ದೇಶದಿಂದ ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**.)

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.